**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-**

1. **ಅಭಿಯಂತರರ ವಿಭಾಗದ ಬಗ್ಗೆ:-**
   - ಶ್ರೀ ಜಿ. ಸಂಜಯ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್‌ನಲ್ಲಿ ನಗರ ಆರೋಗ್ಯ ಕೇಂದ್ರದಲ್ಲಿ 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಕಾರ್ಬೆವ್ಯಾಕ್ಸ್ ವ್ಯಾಕ್ಸಿನೇಷನ್ ದೊರೆಯುತ್ತದೆಯೇ? ಎಂದು ಸಭೆಯಲ್ಲಿ ಪ್ರಶ್ನಿಸಿದರು.
   - ಶ್ರೀಮತಿ ಹೇಮಲತಾ, ಪಿ.ಹೆಚ್.ಸಿ.ಓ. ಆರೋಗ್ಯ ವಿಭಾಗ, ವಾರ್ಡ್-56 ರವರು ಮಾತನಾಡುತ್ತಾ, ನಗರ ಆರೋಗ್ಯ ಕೇಂದ್ರ ವಾರ್ಡ್-56 ರಲ್ಲಿ ಯಾವುದೇ ವ್ಯಾಕ್ಸಿನೇಷನ್ ಲಭ್ಯವಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
   - ಶ್ರೀಮತಿ ಹೇಮಲತಾ, ಪಿ.ಹೆಚ್.ಸಿ.ಓ. ಆರೋಗ್ಯ ವಿಭಾಗ, ವಾರ್ಡ್-56 ರವರು ಮಾತನಾಡುತ್ತಾ, ಆರೋಗ್ಯ ಕೇಂದ್ರವನ್ನು ಕ್ಲೀನಿಂಗ್ ಕಾರ್ಯವನ್ನು ಮಾಡಲು ಸ್ವೀಪರ್ ಅನ್ನು ನೇಮಿಸಿಕೊಡಬೇಕಾಗಿ ಸಭೆಯಲ್ಲಿ ಕೋರಿದರು.
   - ಸಹಾಯಕ ಅಭಿತಯಂತರರು ವಾರ್ಡ್-56 ರವರು ಮಾತನಾಡುತ್ತಾ, ಶ್ರೀ ಜಯಪ್ರಕಾಶ್ ಎಂಬುವವರು ಹೌಸ್‌ಕೀಪಿಂಗ್ ಕಾರ್ಯವನ್ನು ವಾರ್ಡ್ ಕಛೇರಿಯಲ್ಲಿ ನಿರ್ವಹಿಸುತ್ತಿದ್ದು, ಸದರಿಯವರಿಗೆ ಆಸ್ಪತ್ರೆಯಲ್ಲಿ ಒಬ್ಬರನ್ನು ತಾತ್ಕಾಲಿಕವಾಗಿ ನೇಮಿಸಿಕೊಡುವಂತೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

2. **ಅಭಿಯಂತರರ ವಿಭಾಗದ ಬಗ್ಗೆ:-**
   - ಶ್ರೀ ಜಿ. ಸಂಜಯ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾದ ಸಿಸಿ ಕ್ಯಾಮೆರಾಗಳು ಯಾವುದು ಕೆಲಸ ಮಾಡುತ್ತಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.
   - ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾದ ಎಲ್ಲಾ ಸಿಸಿ ಕ್ಯಾಮೆರಾಗಳನ್ನು ಆದಷ್ಟು ಬೇಗ ಸರಿಪಡಿಸಿಕೊಪಡಿಸಲು ಸೂಕ್ತ ಕ್ರಮ ವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.
   - ಸಹಾಯಕ ಅಭಿತಯಂತರರು ವಾರ್ಡ್-56 ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ನೂತನವಾಗಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಹಿಂದೆ ಅಳವಡಿಸಲಾದ ಎಲ್ಲಾ ಕ್ಯಾಮೆರಾಗಳನ್ನು ನಿರ್ವಹಣೆ ಮಾಡಿ ಸರಿಪಡಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು.

3. **ಪಶುಪಾಲನೆ ವಿಭಾಗದ ಬಗ್ಗೆ:-**
   - ಮಾನ್ಯ ನೋಡೆಲ್ ಅಧಿಕಾರಿರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಹೆಚ್ಚಾಗುತ್ತಿರುತ್ತವೆ, ಆದುದರಿಂದ ಬೀದಿ ನಾಯಿಗಳಿಗೆ ರೇಬಿಸ್ ವ್ಯಾಕ್ಸಿನೇಷನ್ ಅಳವಡಿಸಲು ಹಾಗೂ ಗರ್ಭನಿರೋಧಕ ಚಿಕಿತ್ಸೆಯನ್ನು ಮಾಡಲು ಕ್ರಮವಹಿಸುವಂತೆ ಹಿರಿಯ ವೆಟರಿನರಿ ಪರಿವೀಕ್ಷಕರು ರವರಿಗೆ ತಿಳಿಸುವಂತೆ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

4. **ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-**
   - ಶ್ರೀ ಕೆ. ಗಣೇಶ್, ವಾರ್ಡ್‌ನ ನಾಗರೀಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಕಿರ್ಲೋಸ್ಕರ್ ಕಾಲೋನಿ 3ನೇ ಹಂತದ ಎಸ್-50 ನಿವೇಶನವನ್ನು ಸ್ವಚ್ಛ ಮಾಡಿಕೊಡುವಂತೆ ಸಭೆಯಲ್ಲಿ ಕೋರಿದರು.
   - ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ನಿವೇಶನವನ್ನು ಪರಿಶೀಲಿಸಿ ಮಾಲೀಕರಿಗೆ Notice ಜಾರಿ ಮಾಡಿ ಎಚ್ಚರಿಕೆ ನೀಡುವುದು, ಮತ್ತು ಸ್ವಚ್ಛ ಮಾಡಲು ಕ್ರಮವಹಿಸಬೇಕಾಗಿ ಶ್ರೀ ನಿರಂಜನ್ ಎನ್. ಸಿ, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

5. **ಬೃಹತ್ ನೀರು ಕಾಲುವೆ ವಿಭಾಗದ ಬಗ್ಗೆ:-**
   - ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಮಾನ್ಯ ಅಬಕಾರಿ ಸಚಿವರು ಹಾಗೂ ಸ್ಥಳೀಯ ಶಾಸಕರು ಆದ ಶ್ರೀ ಕೆ. ಗೋಪಾಲಯ್ಯನವರು ಕಿರ್ಲೋಸ್ಕರ್ ಕಾಲೋನಿ 3ನೇ ಹಂತದ ಬೃಹತ್ ನೀರು ಕಾಲುವೆ ಸಮಸ್ಯೆಯ ಪರಿಶೀಲನೆಯನ್ನು ಕೈಗೊಂಡಿದ್ದು, ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಸಮಸ್ಯೆ ಬಗೆಹರಿಸಬೇಕಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿತಯಂತರರು ಬೃ.ನೀ.ಕಾ. ವಿಭಾಗ ಪಶ್ಚಿಮ ವಲಯ ರವರಿಗೆ ಸಭೆಯಲ್ಲಿ ಸೂಚಿಸಿದರು.
   - ಶ್ರೀಮತಿ ಭುವನ ಜಿ. ಎಸ್, ಸಹಾಯಕ ಅಭಿಯಂತರರು, ಬೃ.ನೀ.ಕಾ. ವಿಭಾಗ, ಪಶ್ಚಿಮ ವಲಯ, ಬಿಬಿಎಂಪಿ ರವರು ಮಾತನಾಡುತ್ತಾ, ಮುಂದಿನ ಸಭೆಯಲ್ಲಿ ಇದರ ಬಗ್ಗೆ ಮಾಹಿತಿಗಳನ್ನು ವರದಿ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ.

Scanned by CamScanner

